ಅ) ಕನ್ನಡ ಹಾಗೂ ಇತರೆ ಪ್ರಾದೇಶಿಕ ಭಾಷೆಯ ತುಳು, ಕೊಡವಾ ಮತ್ತು ಕೊಂಕಣಿ ಚಲನಚಿತ್ರಗಳಿಗೆ ಈ ಕೆಳಕಂಡ ಸೌಲಭ್ಯ ನೀಡಲಾಗುತ್ತಿದೆ.

1. ವರ್ಣಚಿತ್ರಗಳಿಗೆ 3.50 ಲಕ್ಷ ರೂ. ಗಳ ಸಹಾಯಧನ.
2. ಶೇಕಡಾ 50ರ ಮನರಂಜನಾ ತೆರಿಗೆ ವಿನಾಯಿತಿ.
3. ಚಲನಚಿತ್ರ ನಟನಟಿಯರು, ತಂತ್ರಜ್ಞರುಗಳಿಗೆ ರಾಜ್ಯ ಚಲನಚಿತ್ರ ಪ್ರಶಸ್ತಿ ನೀಡಲಾಗುತ್ತಿದೆ.
4. ಚಲನಚಿತ್ರ ರಂಗದ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿದತಂಹ ಗಣ್ಯವ್ಯಕ್ತಿಗಳಿಗೆ ಪುಟ್ಟಣ್ಣ ಕಣಗಾಲ್ ರಾಜ್ಯ ಪ್ರಶಸ್ತಿ ನೀಡಲಾಗುತ್ತಿದೆ.
5. ಪ್ರಶಸ್ತಿ ವಿಜೇತ ಚಲನಚಿತ್ರಕ್ಕೆ ಒಂದು ವರ್ಷ ಕಾಲ ಶೇಕಡಾ 100ರ ಮನರಂಜನಾ ತೆರಿಗೆ ವಿನಾಯಿತಿ ನೀಡಾಗುತ್ತಿದೆ.
6. ಪ್ರಶಸ್ತಿ ವಿಜೇತ ಚಲನ ಚಿತ್ರಗಳನ್ನು ರಾಜ್ಯ ಚಲನಚಿತ್ರ ಬಂಡಾರದಲ್ಲಿ ಶೇಖರಿಸಿಡಲಾಗುತ್ತಿದೆ.
7. 15 ಸಾವಿರಕ್ಕಿಂತ ಜನಸಂಖ್ಯೆ ಕಡಿಮೆ ಇರುವ ಕಡೆ ಪ್ರದರ್ಶನ ತೆರಿಗೆ ಸಂಪೂರ್ಣ ವಿನಾಯಿತಿ ನೀಡಿದೆ.
8. ಉತ್ತಮ ಮಕ್ಕಳ ಚಿತ್ರಕ್ಕೆ ಪ್ರಶಸ್ತಿ ನೀಡಲು ಅವಕಾಶವಿದೆ.
9. ಕನ್ನಡ ಮತ್ತು ಪ್ರಾದೇಶಿಕ ಭಾಷೆ ಚಿತ್ರದ ಚಿತ್ರೀಕರಣ ಶುಲ್ಕ ರಿಯಾಯಿತಿ.

ಆ) 908 ಚಲನ ಚಿತ್ರಗಳಿಗೆ 1042.37 ಲಕ್ಷ ರೂ.ಗಳ ಸಹಾಯಧನ ಪಾವತಿ ಮಾಡಲಾಗಿದೆ. 24ಚಿತ್ರಗಳಿಗೆ 62.00ಲಕ್ಷ ರೂ.ಗಳ ಸಹಾಯಧನ ಮಂಜೂರಾಗಬೇಕಾಗಿದೆ.

ಇ) ಕನ್ನಡ ಚಲನ ಚಿತ್ರಗಳನ್ನು ಚಿತ್ರಮಂದಿರದವರು ವರ್ಷದಲ್ಲಿ 12 ವಾರಗಳ ಕಾಲ ಕಡ್ಡಾಯವಾಗಿ ಪ್ರದರ್ಶಿಸುವ ಬಗ್ಗೆ ದಿನಾಂಕ 25-2-1987ರಲ್ಲಿ ನಿರ್ಬಂಧ ವಿಧಿಸಲಾಯಿತು. ಉಚ್ಚ ನ್ಯಾಯಾಲಯವು ಸದರಿ ನಿಯಮವನ್ನು ರದ್ದುಗೊಳಿಸುವಂತೆ ಆದೇಶ ಹೊರಡಿಸಿತು.

ಡಬ್ಬಿಂಗ್ ಕನ್ನಡ ಚಿತ್ರಗಳಿಗೆ ಸಹಾಯಧನ ನೀಡುತ್ತಿಲ್ಲ.

ಈ) ಕೇಂದ್ರೀಯ ಚಲನಚಿತ್ರ ದೃಢೀಕರಣ ಮಂಡಳಿಯವರು ದೃಢೀಕರಣಪತ್ರ ನೀಡದಂತೆ ಕನ್ನಡ ಹಾಗೂ ಇತರೆ ಪ್ರಾದೇಶಿಕ ಭಾಷೆಯ ಚಲನಚಿತ್ರಗಳಿಗೆ ಮಾತ್ರ ಸಹಾಯಧನ ನೀಡಲಾಗುತ್ತಿದೆ.

ನೆಲಮಂಗಲ ತಾಲ್ಲೂಕಿನ ಶಿವಗಂಗೆ ಕ್ಷೇತ್ರವನ್ನು ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನ ಮಧುರ ಶನಿದೇವರ ಕ್ಷೇತ್ರವನ್ನು ಪ್ರವಾಸಿಗಳ ಕ್ಷೇತ್ರವಾಗಿ ಮಾಡುವುದು

998 - ಶ್ರೀ ಅಂಜನಮೂರ್ತಿ (ನೆಲಮಂಗಲ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ನೆಲಮಂಗಲ ತಾಲ್ಲೂಕಿನ ಸೊಂಪುರ ಹೋಬಳಿಯಲ್ಲಿರುವ ಶಿವಗಂಗೆ ಕ್ಷೇತ್ರವನ್ನು ಮತ್ತು ದೊಡ್ಡಬಳ್ಳಾಪುರ ತಾಲ್ಲೂಕಿನ ಮಧುರೆ ಶನಿದೇವರ ಕ್ಷೇತ್ರವನ್ನು ಪ್ರವಾಸಿಗಳ ಕೇಂದ್ರವನ್ನಾಗಿ ಮಾಡಬೇಕೆಂದು ಶಾಸಕರಿಂದ ಸರ್ಕಾರಕ್ಕೆ ಮನವಿ ಪತ್ರ ಬಂದಿದೆಯೇ?

2) ಹಾಗಿದ್ದಲ್ಲಿ ಸರ್ಕಾರದವರು ಆ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು) :

1) ಬಂದಿದೆ.

2) ಪ್ರವಾಸೋದ್ಯಮ ಇಲಾಖೆಯು ಈವರೆವಿಗೆ ರಾಜ್ಯದ 210 ಕ್ಷೇತ್ರಗಳನ್ನು ಪ್ರವಾಸಿ ಕೇಂದ್ರಗಳನ್ನಾಗಿ ಅಭಿವೃದ್ಧಿ ಪಡಿಸಲು ಗುರುತಿಸಿರುತ್ತದೆ. ಇವುಗಳಲ್ಲಿ ಶಿವಗಂಗೆ ಕ್ಷೇತ್ರವು ಸೇರಿರುತ್ತದೆ. ಆರ್ಥಿಕ ಸಂಪನ್ಮೂಲಗಳು ಲಭ್ಯವಾದಂತೆ ಇವುಗಳನ್ನು ಅಭಿವೃದ್ಧಿಪಡಿಸಲಾಗುವುದು.

ಗಡಿ ಪ್ರದೇಶದಲ್ಲಿ ಜನಗಣತಿ ಕಾಲಕ್ಕೆ ಗಡಿ ಭಾಗದಲ್ಲಿರುವ ಕನ್ನಡಿಗರಿಗೆ ಮಾರಾಠಿಗಳಿಂದ ಹಿಂಸೆ

278 - ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) :ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಕರ್ನಾಟಕಕ್ಕೆ ಸೇರುವ ಉದ್ದೇಶ ಹೊಂದಿದ ಅಕ್ಕಲಕೋಟೆ ,ಚಾಜಾ ಮಂಗಳಕೇಡಿ ದಕ್ಷಿಣ ಸೊಲ್ಲಾಪುರ ಗಡಹಿಂಗ್ಲಜ, ಮುಂತಾದ ಗ್ರಾಮ ಪಂಚಾಯತಿ ಪ್ರದೇಶದ ಜನರಿಗೆ ಮಹಾರಾಷ್ಟ್ರದ ಅಧಿಕಾರಿಗಳು ತೊಂದರೆ ಕೊಡುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ಗಡಿ ಭಾಗದಲ್ಲಿ ವಾಸಿಸುತ್ತಿರುವ ಜನರಿಗೆ ವಾಕ್ ಸ್ವಾತಂತ್ರ್ಯವಿಲ್ಲ, ಭಾಷಾ ಸ್ವಾತಂತ್ರ್ಯವಿಲ್ಲ, ಪ್ರಚಾರ ಸ್ವಾತಂತ್ರ್ಯವಿಲ್ಲ, ಹಾಗೂ ಮಹಾರಾಷ್ಟ್ರ ಸರ್ಕಾರದ ಅಧಿಕಾರಿಗಳು ಹಾಗೂ ಶಿವಸೇನಿಯರು ಮರಾಠಿ ಮಹಾ ಸಂಘದವರು ಗಡಿ ಪ್ರದೇಶದ ಜನರು ಕನ್ನಡ ಮಾತನಾಡಬಾರದೆಂದು ಹೆದರಿಸುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೆ,*

ಇ) *ಅದೂ ಅಲ್ಲದೆ ಈ ಮೇಲೆ ಹೇಳಿರುವ ಜನರು ಜನಗಣತಿಯಲ್ಲಿ ಕನ್ನಡಿಗರು (ಕನ್ನಡಿಗ) ಎಂದು ಬರೆಯಿಸಬಾರದೆಂದು ಹೆದರಿಸುತ್ತಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ?*

ಈ) *ಸಂಯುಕ್ತ ಕರ್ನಾಟಕ ದಿನಪತ್ರಿಕೆಯಲ್ಲಿ ದಿನಾಂಕ 10-2-91 ರಂದು ಗಡಿ ಭಾಗದಲ್ಲಿರುವ ಕನ್ನಡಿಗರಿಗೆ ಹಿಂಸೆ ಆಗುತ್ತಿರುವ ವಿಷಯ ಪ್ರಕಟಣೆಗೊಂಡಿದ್ದರೂ ಕೂಡ ಸರ್ಕಾರದವರು ಇದರ ಬಗ್ಗೆ ಯಾವ ಕ್ರಮವನ್ನು ಕೈಗೊಂಡಿಲ್ಲವೇಕೆ?*

ಶ್ರೀ ಎಸ್. ಬಂಗಾರಪ್ಪ (ಮುಖ್ಯ ಮಂತ್ರಿಗಳು):

ಅ) ಇಲ್ಲ.

ಆ) ಇಲ್ಲ.

ಇ) ಇಲ್ಲ.

ಈ) ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದ್ದರಿಂದ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಬಿ.ವಿ. ರಾಮಚಂದ್ರಪ್ಪ ಅಂಡ್ ಸನ್ಸ್ ಮೆಟಲ್ ಮರ್ಚಂಟ್ಸ್ ಇವರ ಮಾರಾಟ ತೆರಿಗೆ ಬಗ್ಗೆ

1093 - ಶ್ರೀ ಪಿ.ಸಿ. ಸಿದ್ದಣ್ಣ ಗೌಡರ್ (ಕಲಘಟಗಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಶ್ರೀ ಬಿ.ವಿ. ರಾಮಚಂದ್ರಪ್ಪ ಅಂಡ್ ಸನ್ಸ್, ಮೆಟಲ್ ಮರ್ಚೆಂಟ್ಸ್, ಬಿ.ವಿ ರಾಮಚಂದ್ರಪ್ಪ ಅಂಡ್ ಕಂಪನಿ ಇವರು 1987-88, 88-89, 89-90 ಮತ್ತು 90-91 ಸಾಲಿಗೆ ಸಂದಾಯ ಮಾಡಿರುವ ಮಾರಾಟ ತೆರಿಗೆ ಮೊತ್ತವೆಷ್ಟು,*

ಆ) *ಈ ಸಂಸ್ಥೆಯು ಮೇಲ್ಕಂಡ ವರ್ಷಗಳಲ್ಲಿ ಮಾರಾಟ ತೆರಿಗೆ ಪಾವತಿ ತಪ್ಪಿಸುವುದರಲ್ಲಿ ನಿರತವಾಗಿದೆಯೇ*